**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

**File No:** DTE-ADMI0ACM2/34/2025

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:27-05-2025.

## -:: ಪ್ರವೇಶಾಧಿಸೂಚನೆ ::-

**ವಿಷಯ:-** 2025-26ನೇ ಸಾಲಿನಲ್ಲಿ 02 ವರ್ಷಗಳ **ಐ.ಟಿ.ಐ/ದ್ವಿತೀಯ ಪಿ.ಯು.ಸಿ(ವಿಜ್ಞಾನ)/ದ್ವಿತೀಯ ಪಿ.ಯು.ಸಿ (ತಾಂತ್ರಿಕ ವಿಷಯಗಳಲ್ಲಿ)** ಉತ್ತೀರ್ಣರಾಗಿರುವ ಅರ್ಹ ಅಭ್ಯರ್ಥಿಗಳಿಗೆ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಲ್ಯಾಟರಲ್ ಎಂಟ್ರಿ ಸ್ಕೀಂ ಮುಖಾಂತರ 2ನೇ ವರ್ಷ/3ನೇ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳಿಗೆ **ಆಫ್-ಲೈನ್** ಮೂಲಕ ಅರ್ಜಿ ಆಹ್ವಾನಿಸಿ, ಸೀಟು ಹಂಚಿಕೆ ಮಾಡುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಪತ್ರ ಸಂ. ಇಡಿ 107 ಟಿಪಿಇ 2022, ದಿ:17-08-2022.
2. ಸರ್ಕಾರದ ಆದೇಶ ಸಂ. ಇಡಿ 35 ಟಿಪಿಇ 2019, ದಿ:03-06-2019.

*********

2025-26ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಲ್ಯಾಟರಲ್ ಎಂಟ್ರಿ ಸ್ಕೀಂ ನಡಿ ನೇರವಾಗಿ 2ನೇ ವರ್ಷ / 3ನೇ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳ ಪ್ರವೇಶಾತಿಗೆ 02 ವರ್ಷಗಳ ಐ.ಟಿ.ಐ/ದ್ವಿತೀಯ ಪಿ.ಯು.ಸಿ(ವಿಜ್ಞಾನ/ತಾಂತ್ರಿಕ ವಿಷಯಗಳು)ಗಳಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಗೆ **"ಆಫ್-ಲೈನ್"** ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಎ.ಐ.ಸಿ.ಟಿ.ಇ ನಿಯಮ ಮತ್ತು ಸರ್ಕಾರದ ಆದೇಶಗಳನ್ವಯ ಇಂಟೇಕ್‌ಗೆ ಹೆಚ್ಚುವರಿಯಾಗಿ (Over and above Intake) ಶೇ.10 ರಷ್ಟು ಸೀಟುಗಳನ್ನು ಮತ್ತು ಕಳೆದ ಸಾಲಿನ ಮೊದಲನೇ ವರ್ಷದಲ್ಲಿ ಭರ್ತಿ ಆಗದ ಉಳಿಕೆ ಸೀಟುಗಳಿಗೆ ಮೆರಿಟ್ ಆಧಾರಿತ ಪ್ರವೇಶಾತಿ ವಿಧಾನದಿಂದ ಪ್ರಾಂಶುಪಾಲರ ಹಂತದಲ್ಲಿ ಆಫ್-ಲೈನ್ ಮೂಲಕ ಸೀಟು ಹಂಚಿಕೆ ಮಾಡಲಾಗುವುದು.**

ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ (ಅನುದಾನಿತ ಕೋರ್ಸುಗಳು) ಅರ್ಜಿ ಸಲ್ಲಿಸುವ ಅರ್ಹ ಅಭ್ಯರ್ಥಿಗಳ ಮೆರಿಟ್‌ಗನುಗುಣವಾಗಿ "ಆಫ್-ಲೈನ್" ಮೂಲಕ ಸೀಟು ಹಂಚಿಕೆ ಮಾಡಲಾಗುವುದು. ಆದ್ದರಿಂದ, ಅಭ್ಯರ್ಥಿಗಳು ತಾವು ಪ್ರವೇಶ ಬಯಸುವ ಸಂಸ್ಥೆಗೆ ಭರ್ತಿ ಮಾಡಿದ ಅರ್ಜಿಯನ್ನು ಪ್ರಾಂಶುಪಾಲರಿಗೆ ಸಲ್ಲಿಸುವುದು. ಪ್ರವೇಶಾತಿ ಪ್ರಕ್ರಿಯೆಯ ವಿವಿಧ ಹಂತಗಳ ತಾತ್ಕಾಲಿಕ ವೇಳಾಪಟ್ಟಿಯು ಈ ಕೆಳಕಂಡಂತಿದೆ.

| | **ಪ್ರಾರಂಭ ದಿನಾಂಕ** | **ಕೊನೆಯ ದಿನಾಂಕ** |
|---|---|---|
| **ಇಲಾಖೆಯ ಅಧಿಕೃತ ವೆಬ್‌ಸೈಟ್‌ಗಳಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿದ ಅರ್ಜಿಯನ್ನು ಪ್ರವೇಶ ಬಯಸುವ ಸಂಸ್ಥೆಯ ಪ್ರಾಂಶುಪಾಲರಿಗೆ ನಿಗಧಿತ ದಿನಾಂಕದೊಳಗೆ ಸಲ್ಲಿಸಲು ಪ್ರಾರಂಭ ಮತ್ತು ಕೊನೆಯ ದಿನಾಂಕ:** | **29-05-2025** | **14-06-2025** |
| **ಅರ್ಹ ಅಭ್ಯರ್ಥಿಗಳ ಮೆರಿಟ್ ಪಟ್ಟಿಯನ್ನು MS-EXCEL Format ನಲ್ಲಿ ತಯಾರಿಸಿ ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸುವುದು.** (ಐಟಿಐ ಟ್ರೇಡ್ ನ 02 ವರ್ಷಗಳ / ಎಲ್ಲಾ ಸೆಮಿಸ್ಟರ್‌ನಲ್ಲಿ ಪಡೆದ ಒಟ್ಟಾರೆ ಅಂಕಗಳ ಆಧಾರದ ಮೇಲೆ ಹಾಗೂ ದ್ವಿತೀಯ ಪಿಯುಸಿಯಲ್ಲಿ ಪಡೆದ ಒಟ್ಟಾರೆ ಅಂಕಗಳ ಆಧಾರದ ಮೇಲೆ ಮೆರಿಟ್ ಪಟ್ಟಿ ತಯಾರಿಸತಕ್ಕದ್ದು) | **16-06-2025** | |
| ಆಫ್‌ಲೈನ್ ಮೂಲಕ ಎಲ್ಲಾ ಹಂತಗಳ ಸೀಟು ಹಂಚಿಕೆ ಪ್ರಕ್ರಿಯೆ ನಡೆಸಿ, ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಮೂಲ ದಾಖಲೆಗಳು ಹಾಗೂ ಪ್ರವೇಶ ಶುಲ್ಕದೊಂದಿಗೆ ಪ್ರವೇಶ ಪಡೆಯಲು ದಿನಾಂಕ: | **17-06-2025 ಮತ್ತು 18-06-2025** | |

| | |
|---|---|
| ಸೀಟುಗಳು ಭರ್ತಿ ಆಗದೆ ಉಳಿಕೆಯಾದಲ್ಲಿ ಪ್ರಾಂಶುಪಾಲರ ಹಂತದಲ್ಲಿಯೇ ಆಫ್‌ಲೈನ್ ಮೂಲಕ ಸೀಟು ಹಂಚಿಕೆ ಮಾಡಲು ಪ್ರಾರಂಭ ಮತ್ತು ಅಂತಿಮ ದಿನಾಂಕ: | **19-06-2025 ರಿಂದ 25-06-2025 ರವರೆಗೆ** |

## ಸರ್ಕಾರಿ ಪಾಲಿಟೆಕ್ನಿಕ್‌ಗಳು

| ಕ್ರ.ಸಂ. | ಕೋಡ್ | ಪಾಲಿಟೆಕ್ನಿಕ್ ಹೆಸರು | ಕ್ರ.ಸಂ. | ಕೋಡ್ | ಪಾಲಿಟೆಕ್ನಿಕ್ ಹೆಸರು |
|---|---|---|---|---|---|
| (1) | (2) | (3) | (1) | (2) | (3) |
| 1. | 102 | ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು | 54. | 116 | ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್.ಪೇಟೆ |
| 2. | 103 | ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು | 55. | 119 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು |
| 3. | 104 | ಸರ್ಕಾರಿ ಪಾಲಿಟೆಕ್ನಿಕ್, ಬಳ್ಳಾರಿ | 56. | 120 | ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ |
| 4. | 105 | ಶ್ರೀಮತಿ ಎಲ್.ವಿ ಸರ್ಕಾರಿ ಪಾಲಿಟೆಕ್ನಿಕ್, ಹಾಸನ | 57. | 121 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ |
| 5. | 106 | ಡಿ.ಆರ್.ಆರ್. ಸರ್ಕಾರಿ ಪಾಲಿಟೆಕ್ನಿಕ್, ದಾವಣಗೆರೆ | 58. | 123 | ಸರ್ಕಾರಿ ಜಿ.ಆರ್.ಐ.ಸಿ.ಪಿ, ಬೆಂಗಳೂರು |
| 6. | 107 | ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ | 59. | 124 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು |
| 7. | 108 | ಸಿ.ಪಿ.ಸಿ ಸರ್ಕಾರಿ ಪಾಲಿಟೆಕ್ನಿಕ್, ಮೈಸೂರು | 60. | 126 | ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು |
| 8. | 109 | ಸರ್ಕಾರಿ ಪಾಲಿಟೆಕ್ನಿಕ್, ಕಲಬುರ್ಗಿ | 61. | 131 | ಸರ್ಕಾರಿ ಗಣಿ ಶಿಕ್ಷಣ ಶಾಲೆ, ಕೆ.ಜಿ.ಎಫ್ |
| 9. | 111 | ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ | 62. | 132 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹಾಸನ |
| 10. | 110 | ಡಿ.ಎ.ಸಿ.ಜಿ ಸರ್ಕಾರಿ ಪಾಲಿಟೆಕ್ನಿಕ್, ಚಿಕ್ಕಮಗಳೂರು | 63. | 135 | ಸರ್ಕಾರಿ ಮಹಿಳಾ ವಸತಿ ಪಾಲಿಟೆಕ್ನಿಕ್, ಶಿವಮೊಗ್ಗ |
| 11. | 114 | ಸರ್ಕಾರಿ ಪಾಲಿಟೆಕ್ನಿಕ್, ಕಾರವಾರ | 64. | 136 | ಸರ್ಕಾರಿ ಪಾಲಿಟೆಕ್ನಿಕ್, ಬಾಗೇಪಲ್ಲಿ |
| 12. | 115 | ಸರ್ಕಾರಿ ಪಾಲಿಟೆಕ್ನಿಕ್, ಬೀದರ್ | 65. | 137 | ಸರ್ಕಾರಿ ಪಾಲಿಟೆಕ್ನಿಕ್, ಕೊಪ್ಪಳ. |
| 13. | 112 | ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು | 66. | 138 | ಸರ್ಕಾರಿ ಪಾಲಿಟೆಕ್ನಿಕ್, ಕುಷ್ಟಗಿ. |
| 14. | 113 | ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ | 67. | 139 | ಸರ್ಕಾರಿ ಪಾಲಿಟೆಕ್ನಿಕ್, ಸೊರಬ. |
| 15. | 117 | ಸರ್ಕಾರಿ ಪಾಲಿಟೆಕ್ನಿಕ್, ರಾಯಚೂರು | 68. | 140 | ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರಘಟ್ಟ, ಬೆಂಗಳೂರು. |
| 16. | 118 | ಸರ್ಕಾರಿ ಪಾಲಿಟೆಕ್ನಿಕ್, ಕುಶಾಲನಗರ | 69. | 141 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಲಬುರ್ಗಿ |
| 17. | 128 | ವಿಐಎಸ್‌ಎಸ್‌ಜೆ ಸರ್ಕಾರಿ ಪಾಲಿಟೆಕ್ನಿಕ್, ಭದ್ರಾವತಿ | 70. | 142 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ರಾಮನಗರ |
| 18. | 130 | ಸರ್ಕಾರಿ ಪಾಲಿಟೆಕ್ನಿಕ್, ಚಾಮರಾಜನಗರ | 71. | 165 | ಸರ್ಕಾರಿ ಪಾಲಿಟೆಕ್ನಿಕ್, ಕಾರಟಗಿ. |
| 19. | 149 | ಸರ್ಕಾರಿ ಪಾಲಿಟೆಕ್ನಿಕ್, ಚಿತ್ರದುರ್ಗ. | 72. | 166 | ಸರ್ಕಾರಿ ಪಾಲಿಟೆಕ್ನಿಕ್, ಕಾಳಗಿ. |
| 20. | 163 | ಸರ್ಕಾರಿ ಪಾಲಿಟೆಕ್ನಿಕ್, ಬಂಟ್ವಾಳ. | 73. | 167 | ಸರ್ಕಾರಿ ಪಾಲಿಟೆಕ್ನಿಕ್, ಮಂಡಗೋಡ್ |
| 21. | 171 | ಸರ್ಕಾರಿ ಪಾಲಿಟೆಕ್ನಿಕ್, ಹುಬ್ಬಳ್ಳಿ. | 74. | 168 | ಸರ್ಕಾರಿ ಪಾಲಿಟೆಕ್ನಿಕ್, ಹೊಸದುರ್ಗ. |
| 22. | 170 | ಸರ್ಕಾರಿ ಪಾಲಿಟೆಕ್ನಿಕ್, ಹರಿಹರ | 75. | 169 | ಸರ್ಕಾರಿ ಪಾಲಿಟೆಕ್ನಿಕ್, ಕೆ.ಜಿ.ಎಫ್ |
| 23. | 101 | ಸರ್ಕಾರಿ ಜವಳಿ ತಂತ್ರಜ್ಞಾನ ಸಂಸ್ಥೆ, ಕೆ.ಆರ್.ವೃತ್ತ, ಬೆಂಗಳೂರು | 76. | 173 | ಸರ್ಕಾರಿ ಪಾಲಿಟೆಕ್ನಿಕ್, ಹರಪನಹಳ್ಳಿ. |
| 24. | 143 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಶಿರಾಳಕೊಪ್ಪ. | 77. | 172 | ಸರ್ಕಾರಿ ಪಾಲಿಟೆಕ್ನಿಕ್, ಕಂಪ್ಲಿ. |
| 25. | 144 | ಸರ್ಕಾರಿ ಪಾಲಿಟೆಕ್ನಿಕ್, ಕಾರ್ಕಳ. | 78. | 174 | ಸರ್ಕಾರಿ ಪಾಲಿಟೆಕ್ನಿಕ್, ಕೂಡ್ಲಿಗಿ. |
| 26. | 145 | ಸರ್ಕಾರಿ ಪಾಲಿಟೆಕ್ನಿಕ್, ಉಡುಪಿ. | 79. | 175 | ಸರ್ಕಾರಿ ಪಾಲಿಟೆಕ್ನಿಕ್, ಇಮ್ಮಡಿಹಳ್ಳಿ, ಬೆಂಗಳೂರು |
| 27. | 146 | ಸರ್ಕಾರಿ ಪಾಲಿಟೆಕ್ನಿಕ್, ಲಿಂಗಸಗೂರು | 80. | 176 | ಸರ್ಕಾರಿ ಪಾಲಿಟೆಕ್ನಿಕ್, ಝಳಕಿ. |
| 28. | 147 | ಸರ್ಕಾರಿ ಪಾಲಿಟೆಕ್ನಿಕ್, ಗದಗ. | 81. | 177 | ಸರ್ಕಾರಿ ಪಾಲಿಟೆಕ್ನಿಕ್, ಸಿದ್ದಾಪುರ |
| 29. | 148 | ಸರ್ಕಾರಿ ಪಾಲಿಟೆಕ್ನಿಕ್, ಗಜೇಂದ್ರಘಡ. | 82. | 178 | ಸರ್ಕಾರಿ ಪಾಲಿಟೆಕ್ನಿಕ್, ರಬಕವಿ ಬನಹಟ್ಟಿ. |
| 30. | 150 | ಸರ್ಕಾರಿ ಪಾಲಿಟೆಕ್ನಿಕ್, ಹಾನಗಲ್. | 83. | 179 | ಸರ್ಕಾರಿ ಪಾಲಿಟೆಕ್ನಿಕ್, ಅಥಣಿ |
| 31. | 151 | ಶ್ರೀಮತಿ ಎಸ್.ಆರ್. ನಿರಾಣಿ ಸರ್ಕಾರಿ ಪಾಲಿಟೆಕ್ನಿಕ್, ಬೀಳಗಿ. | 84. | 180 | ಸರ್ಕಾರಿ ಪಾಲಿಟೆಕ್ನಿಕ್, ಸುರಪುರ. |
| 32. | 152 | ಸರ್ಕಾರಿ ಪಾಲಿಟೆಕ್ನಿಕ್, ಬಾಗಲಕೋಟೆ. | 85. | 181 | ಸರ್ಕಾರಿ ಪಾಲಿಟೆಕ್ನಿಕ್, ಔರಾದ್. |
| 33. | 153 | ಸರ್ಕಾರಿ ಪಾಲಿಟೆಕ್ನಿಕ್, ಬೇಲೂರು. | 86. | 182 | ಸರ್ಕಾರಿ ಪಾಲಿಟೆಕ್ನಿಕ್, ಹಿರಿಯೂರು |
| 34. | 154 | ಸರ್ಕಾರಿ ಪಾಲಿಟೆಕ್ನಿಕ್, ಹೊಳೆನರಸಿಪುರ. | 87. | 183 | ಸರ್ಕಾರಿ ಪಾಲಿಟೆಕ್ನಿಕ್, ಚನ್ನಸಂದ್ರ., ಬೆಂಗಳೂರು. |
| 35. | 155 | ಸರ್ಕಾರಿ ಪಾಲಿಟೆಕ್ನಿಕ್, ತುರುವೇಕೆರೆ. | 88. | 184 | ಸರ್ಕಾರಿ ಪಾಲಿಟೆಕ್ನಿಕ್, ದೇವದುರ್ಗ. |
| 36. | 156 | ಸರ್ಕಾರಿ ಪಾಲಿಟೆಕ್ನಿಕ್, ಮುಳಬಾಗಿಲು. | 89. | 185 | ಶ್ರೀ ಚನ್ನಕೇಶವ ಸರ್ಕಾರಿ ಪಾಲಿಟೆಕ್ನಿಕ್, ಗುಡ್ಡದ ಚನ್ನಾಪುರ, ಬಂಕಾಪುರ. |
| 37. | 157 | ಸರ್ಕಾರಿ ಪಾಲಿಟೆಕ್ನಿಕ್, ಅರಕೆರೆ-ಶ್ರೀರಂಗಪಟ್ಟಣ. | 90. | 187 | ಸರ್ಕಾರಿ ಪಾಲಿಟೆಕ್ನಿಕ್, ಶಿರಾ |

| (1) | (2) | (3) | (1) | (2) | (3) |
|---|---|---|---|---|---|
| 38. | 158 | ಸರ್ಕಾರಿ ಪಾಲಿಟೆಕ್ನಿಕ್, ನಾಗಮಂಗಲ. | 91. | 193 | ಸರ್ಕಾರಿ ಪಾಲಿಟೆಕ್ನಿಕ್, ಚನ್ನಗಿರಿ |
| 39. | 159 | ಸರ್ಕಾರಿ ಪಾಲಿಟೆಕ್ನಿಕ್, ರಾಮನಗರ. | 92. | 194 | ಸರ್ಕಾರಿ ಪಾಲಿಟೆಕ್ನಿಕ್, ಹೊನ್ನಾಳಿ |
| 40. | 160 | ಸರ್ಕಾರಿ ಪಾಲಿಟೆಕ್ನಿಕ್, ಮಿರ್ಲೆ. | 93. | 195 | ಸರ್ಕಾರಿ ಪಾಲಿಟೆಕ್ನಿಕ್, ಕೊಪ್ಪ |
| 41. | 161 | ಸರ್ಕಾರಿ ಪಾಲಿಟೆಕ್ನಿಕ್, ಅಫಜಲಪೂರ | 94. | 196 | ಸರ್ಕಾರಿ ಪಾಲಿಟೆಕ್ನಿಕ್, ತಾರಿಹಾಳ, ಹುಬ್ಬಳ್ಳಿ. |
| 42. | 162 | ಸರ್ಕಾರಿ ಪಾಲಿಟೆಕ್ನಿಕ್, ಜೋಯಿಡ. | 95. | 200 | ಸರ್ಕಾರಿ ಪಾಲಿಟೆಕ್ನಿಕ್, ಮಳವಳ್ಳಿ, ಮಂಡ್ಯ ಜಿಲ್ಲೆ |
| 43. | 164 | ಸರ್ಕಾರಿ ಪಾಲಿಟೆಕ್ನಿಕ್, ಮುಧೋಳ | 96. | 710 | ಸರ್ಕಾರಿ ಪಾಲಿಟೆಕ್ನಿಕ್, ಬಸವಾಪಟ್ಟಣ, ದಾವಣಗೆರೆ ಜಿಲ್ಲೆ |
| 44. | 188 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹೊಳೆನರಸೀಪುರ | 97. | 199 | ಸರ್ಕಾರಿ ಪಾಲಿಟೆಕ್ನಿಕ್, ಸದಲಗ, ಬೆಳಗಾವಿ ಜಿಲ್ಲೆ |
| 45. | 189 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮೊಸಳೆಹೊಸಳ್ಳಿ | 98. | 705 | ಸರ್ಕಾರಿ ಪಾಲಿಟೆಕ್ನಿಕ್, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ |
| 46. | 190 | ಸರ್ಕಾರಿ ಪಾಲಿಟೆಕ್ನಿಕ್, ಬಸವನಬಾಗೇವಾಡಿ | 99. | 709 | ಸರ್ಕಾರಿ ಪಾಲಿಟೆಕ್ನಿಕ್, ಚಿತ್ರಳ್ಳಿ, ಹೊಳಲ್ಕೆರೆ ತಾ॥ |
| 47. | 191 | ಸರ್ಕಾರಿ ಪಾಲಿಟೆಕ್ನಿಕ್, ಗೌರಿಬಿದನೂರು | 100. | 711 | ಸರ್ಕಾರಿ ಪಾಲಿಟೆಕ್ನಿಕ್, ಅರಕೇರಾ |
| 48. | 192 | ಸರ್ಕಾರಿ ಪಾಲಿಟೆಕ್ನಿಕ್, ಕಾಪು, ಉಡುಪಿ ಜಿಲ್ಲೆ | 101. | 712 | ಸರ್ಕಾರಿ ಪಾಲಿಟೆಕ್ನಿಕ್, ಪಿರಿಯಾಪಟ್ಟಣ |
| 49. | 197 | ಸರ್ಕಾರಿ ಪಾಲಿಟೆಕ್ನಿಕ್, ಕಡೂರು, ಚಿಕ್ಕಮಗಳೂರು ಜಿಲ್ಲೆ | 102. | 713 | ಸರ್ಕಾರಿ ಪಾಲಿಟೆಕ್ನಿಕ್, ಕಮದೊಳ್ಳಿ |
| 50. | 198 | ಸರ್ಕಾರಿ ಪಾಲಿಟೆಕ್ನಿಕ್, ಹಾರೋಹಳ್ಳಿ, ರಾಮನಗರ ಜಿಲ್ಲೆ | 103. | 714 | ಸರ್ಕಾರಿ ಪಾಲಿಟೆಕ್ನಿಕ್, ಹೊಳೆ ಆಲೂರು |
| 51. | 706 | ಸರ್ಕಾರಿ ಪಾಲಿಟೆಕ್ನಿಕ್, ಹಳಿಯಾಳ, ಉತ್ತರ ಕನ್ನಡ ಜಿಲ್ಲೆ | 104. | 715 | ಶ್ರೀ ಪ್ರತಾಪ್ ಗೌಡ ಪಾಟೀಲ್ ಸರ್ಕಾರಿ ಪಾಲಿಟೆಕ್ನಿಕ್, ಮಸ್ಕಿ |
| 52. | 707 | ಸರ್ಕಾರಿ ಪಾಲಿಟೆಕ್ನಿಕ್, ಗುನ್ನಾಳ, ಕೊಪ್ಪಳ ಜಿಲ್ಲೆ | 105. | 716 | ಸರ್ಕಾರಿ ಪಾಲಿಟೆಕ್ನಿಕ್, ತಿಪಟೂರು |
| 53. | 708 | ಸರ್ಕಾರಿ ಪಾಲಿಟೆಕ್ನಿಕ್, ಹೂವಿನಹಡಗಲಿ, ವಿಜಯನಗರ ಜಿಲ್ಲೆ | 106. | 717 | ಸರ್ಕಾರಿ ಪಾಲಿಟೆಕ್ನಿಕ್, ತರಿಕೆರೆ, ಚಿಕ್ಕಮಗಳೂರು ಜಿಲ್ಲೆ |
| | | | 107. | 718 | ಸರ್ಕಾರಿ ಪಾಲಿಟೆಕ್ನಿಕ್, ಬ್ಯಾಡಗಿ, ಹಾವೇರಿ ಜಿಲ್ಲೆ |
| **ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳು** | | | | | |
| **ಕ್ರ.ಸಂ.** | **ಕೋಡ್** | **ಪಾಲಿಟೆಕ್ನಿಕ್ ಹೆಸರು** | **ಕ್ರ.ಸಂ.** | **ಕೋಡ್** | **ಪಾಲಿಟೆಕ್ನಿಕ್ ಹೆಸರು** |
| 1. | 202 | ಕೆ.ಹೆಚ್.ಕೆ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಧಾರವಾಡ. | 22. | 324 | ಜೆ.ಎಸ್.ಎಸ್. ಪಾಲಿಟೆಕ್ನಿಕ್, ನಂಜನಗೂಡು. |
| 2. | 204 | ಎಂ.ಇ.ಐ ಪಾಲಿಟೆಕ್ನಿಕ್, ರಾಜಾಜಿನಗರ, ಬೆಂಗಳೂರು | 23. | 325 | ಡಿ.ಬನುಮಯ್ಯ ಪಾಲಿಟೆಕ್ನಿಕ್, ಮೈಸೂರು. |
| 3. | 203 | ಎ.ಪಿ.ಎಸ್. ಪಾಲಿಟೆಕ್ನಿಕ್, ಸೋಮನಹಳ್ಳಿ, ಬೆಂಗಳೂರು. | 24. | 327 | ಆರ್.ಎನ್.ಶೆಟ್ಟಿ ಪಾಲಿಟೆಕ್ನಿಕ್, ಶಿರಸಿ. |
| 4. | 205 | ಬಿ.ವಿ.ವಿ.ಎಸ್ ಪಾಲಿಟೆಕ್ನಿಕ್, ಬಾಗಲಕೋಟೆ. | 25. | 330 | ಇಂಪ್ಯಾಕ್ಟ್ ಪಾಲಿಟೆಕ್ನಿಕ್, ಕೊಡಿಗೇಹಳ್ಳಿ, ಬೆಂಗಳೂರು |
| 5. | 208 | ಜೆ.ಎಸ್.ಎಸ್. ಪಾಲಿಟೆಕ್ನಿಕ್ ಫಾರ್ ವುಮೆನ್ಸ್, ಮೈಸೂರು. | 26. | 331 | ಅಲ್-ಖತೀಬ್ ಪಾಲಿಟೆಕ್ನಿಕ್, ಭೂಪಸಂದ್ರ, ಬೆಂಗಳೂರು |
| 6. | 301 | ಟಿಪ್ಪು ಶಾಹೀದ್ ಪಾಲಿಟೆಕ್ನಿಕ್, ಹುಬ್ಬಳ್ಳಿ. | 27. | 332 | ಕೆ.ವಿ.ಟಿ ಪಾಲಿಟೆಕ್ನಿಕ್, ಚಿಕ್ಕಬಳ್ಳಾಪುರ. |
| 7. | 302 | ಎಸ್.ಟಿ.ಜೆ ಪಾಲಿಟೆಕ್ನಿಕ್, ಹರಪ್ಪನಹಳ್ಳಿ. | 28. | 333 | ಅಂಜುಮನ್-ಎ-ಇಸ್ಲಾಂ ಪಾಲಿಟೆಕ್ನಿಕ್, ಗದಗ. |
| 8. | 303 | ಮರಾಠ ಮಂಡಳ ಪಾಲಿಟೆಕ್ನಿಕ್, ಬೆಳಗಾಂ. | 29. | 335 | ಬಾಪೂಜಿ ಪಾಲಿಟೆಕ್ನಿಕ್, ಶಾಬನೂರು, ದಾವಣಗೆರೆ. |
| 9. | 304 | ಆರ್.ಟಿ.ಇ.ಸೊಸೈಟಿ ರೂರಲ್ ಪಾಲಿಟೆಕ್ನಿಕ್, ಹುಲ್ಕೋಟಿ | 30. | 337 | ಎಸ್.ಎನ್. ಮೂಡಬಿದ್ರೆ ಪಾಲಿಟೆಕ್ನಿಕ್, ಮೂಡಬಿದ್ರೆ |
| 10. | 306 | ಹೆಚ್.ಎಂ.ಎಸ್. ಪಾಲಿಟೆಕ್ನಿಕ್, ತುಮಕೂರು | 31. | 338 | ಕೆ.ವಿ.ಜಿ ಪಾಲಿಟೆಕ್ನಿಕ್, ಸುಳ್ಯ. |
| 11. | 307 | **ಕೆ.ಸಿ.ಟಿ ಪಾಲಿಟೆಕ್ನಿಕ್, ಕಲಬುರ್ಗಿ** | 32. | 340 | ಶ್ರೀ.ನಿರಂಜನ ಸ್ವಾಮಿ ಪಾಲಿಟೆಕ್ನಿಕ್, ಸುಂಕದಕಟ್ಟೆ. |
| 12. | 308 | ಸಂಜಯ್ ಮೆಮೋರಿಯಲ್ ಪಾಲಿಟೆಕ್ನಿಕ್, ಸಾಗರ. | 33. | 346 | ಡಿ.ವಿ.ಎಸ್ ಪಾಲಿಟೆಕ್ನಿಕ್, ಶಿವಮೊಗ್ಗ. |
| 13. | 309 | ಎನ್.ಆರ್.ಎ.ಎಂ. ಪಾಲಿಟೆಕ್ನಿಕ್, ನಿಟ್ಟೆ. | 34. | 351 | ಡಾ॥ ಜಿ.ಎಸ್ ಮೇಲ್ಕೋಟೆ ಗ್ರಾಮೀಣ ಪಾಲಿಟೆಕ್ನಿಕ್, ಕುಕ್ಕನೂರು, ಯಲಬುರ್ಗಾ ತಾ॥ |
| 14. | 310 | ಶ್ರೀ ಮಾಣಿಕ್‌ರಾವ್ ಪಾಟೀಲ್ ರೂರಲ್ ಪಾಲಿಟೆಕ್ನಿಕ್, ಠಾಣಕುಶನೂರು, ಬೀದರ್ ಜಿಲ್ಲೆ (ಜೆ.ಎನ್. ಪಾಲಿಟೆಕ್ನಿಕ್) | 35. | 353 | ಎಸ್.ಜೆ.ಎಂ. ವಿದ್ಯಾಪೀಠ ಪಾಲಿಟೆಕ್ನಿಕ್, ಬೀರೂರು |
| 15. | 311 | ಎಂ.ವಿ.ಪಿ ರೂರಲ್ ಪಾಲಿಟೆಕ್ನಿಕ್, ಹಂಸಭಾವಿ. | 36. | 363 | ಎಸ್.ಇ.ಎಸ್ ಪಾಲಿಟೆಕ್ನಿಕ್, ಸಿರುಗುಪ್ಪ |
| 16. | 312 | ಗೊಮಟೇಶ್ ಪಾಲಿಟೆಕ್ನಿಕ್, ಹಿಂದುವಾಡಿ, ಬೆಳಗಾಂ. | 37. | 364 | ಶ್ರೀ.ವೆಂಕಟೇಶ್ವರ ಪಾಲಿಟೆಕ್ನಿಕ್, ಬನ್ನೇರುಘಟ್ಟ, ಬೆಂಗಳೂರು |

| (1) | (2) | (3) | (1) | (2) | (3) |
|---|---|---|---|---|---|
| 17. | 315 | ಮೋತಿ ಚಂದ್ ಲೆಂಗಡೆ ಭರತೇಶ್ ಪಾಲಿಟೆಕ್ನಿಕ್, ಬೆಳಗಾಂ. | 38. | 370 | ಶ್ರೀ.ವಿಧ್ಯಾದಿರಾಜ ಪಾಲಿಟೆಕ್ನಿಕ್, ಕುಮುಟಾ |
| 18. | 316 | ಟಿ.ಎಂ.ಎ.ಇ. ಸೊಸೈಟಿ ಪಾಲಿಟೆಕ್ನಿಕ್, ಹೊಸಪೇಟೆ. | 39. | 371 | ಸಹ್ಯಾದ್ರಿ ಪಾಲಿಟೆಕ್ನಿಕ್, ತೀರ್ಥಹಳ್ಳಿ. |
| 19. | 319 | ಸಿ.ವಿ. ಚರಂತಿಮಠ ಗ್ರಾಮೀಣ ಪಾಲಿಟೆಕ್ನಿಕ್, ಹುನಗುಂದ. | 40. | 433 | ಪಿ.ವಿ.ಪಿ ಪಾಲಿಟೆಕ್ನಿಕ್, ಮಲ್ಲತ್ತಹಳ್ಳಿ, ಬೆಂಗಳೂರು |
| 20. | 320 | ಬಿ.ವಿ.ವಿ.ಎಸ್ ಎಸ್.ಆರ್ ವಸ್ತ್ರದ್ ಗ್ರಾಮೀಣ ಪಾಲಿಟೆಕ್ನಿಕ್, ಗುಳೇದಗುಡ್ಡ | 41. | 323 | ನೂತನ ವಿದ್ಯಾಲಯ ಪಾಲಿಟೆಕ್ನಿಕ್, ಕಲಬುರ್ಗಿ |
| 21. | 321 | ಎಸ್.ಜೆ.ಎಂ ಪಾಲಿಟೆಕ್ನಿಕ್, ಚಿತ್ರದುರ್ಗ. | | | |

**ಎಐಸಿಟಿಇ ಪ್ರವೇಶ ನಿಯಮಾವಳಿಗಳ ಪ್ರಕಾರ ಎರಡು ವರ್ಷಗಳ ಐಟಿಐ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ ಯಾವುದೇ ಡಿಪ್ಲೋಮಾ ಕೋರ್ಸುಗಳ 02ನೇ ವರ್ಷ/03ನೇ ಸೆಮಿಸ್ಟರ್ ಪ್ರವೇಶ ಪಡೆಯಲು ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ ಅನುಮತಿ ನೀಡಿ ಅವಕಾಶ ಕಲ್ಪಿಸಿದ್ದು, ಸದರಿ ನಿಯಮಾವಳಿಗಳ ಪ್ರಕಾರ ಪ್ರವೇಶ ಪಡೆದ ಅಭ್ಯರ್ಥಿಗಳು ಸಿ–20 ಪಠ್ಯಕ್ರಮದ ಕೋಷ್ಟಕ–1 ಮತ್ತು 2 ರಲ್ಲಿ ತಿಳಿಸಿದ ಈ ಕೆಳಕಂಡ ಬ್ರಿಡ್ಜ್ ಕೋರ್ಸುಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ.**

**ಕೋಷ್ಟಕ–1**

ಎರಡು ವರ್ಷಗಳ ಐಟಿಐ ಟ್ರೇಡ್ ಉತ್ತೀರ್ಣರಾದ ಅಭ್ಯರ್ಥಿಗಳು ಸಂಬಂಧಿಸಿದ ಡಿಪ್ಲೋಮಾ ಕೋರ್ಸುಗಳ 02ನೇ ವರ್ಷ/03ನೇ ಸೆಮಿಸ್ಟರ್‌ಗೆ (ಉದಾ: ಎರಡು ವರ್ಷಗಳ ಎಲೆಕ್ಟ್ರಿಷಿಯನ್ ಟ್ರೇಡ್‌ನಲ್ಲಿ ಉತ್ತೀರ್ಣರಾದ ಅಭ್ಯರ್ಥಿಯು ಸಂಬಂಧಿಸಿದ ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಡಿಪ್ಲೋಮಾ ಕೋರ್ಸಿಗೆ) ಪ್ರವೇಶ ಪಡೆದಲ್ಲಿ, ಈ ಕೆಳಕಂಡ ಬ್ರಿಡ್ಜ್ ಕೋರ್ಸುಗಳನ್ನು ಅಭ್ಯಸಿಸಬೇಕಾಗಿರುತ್ತದೆ.

| Sl.No. | Bridge Course | To be taken in the Semester |
|---|---|---|
| 01. | C-20 Engineering Mathematics | 3rd Semester |
| 02. | C-20 Communication Skills | |
| 03. | C-20 Project Management Skills | 4th Semester |
| 04. | C-20 Statistics and Analytics | |

**ಕೋಷ್ಟಕ–2**

ಎರಡು ವರ್ಷಗಳ ಐಟಿಐ ಉತ್ತೀರ್ಣರಾದ ಅಭ್ಯರ್ಥಿಗಳು, ಯಾವುದೇ ಡಿಪ್ಲೋಮಾ ಕೋರ್ಸುಗಳ 02ನೇ ವರ್ಷ/03ನೇ ಸೆಮಿಸ್ಟರ್‌ಗೆ (ಉದಾ: ಎರಡು ವರ್ಷಗಳ ಎಲೆಕ್ಟ್ರಿಷಿಯನ್ ಟ್ರೇಡ್‌ನಲ್ಲಿ ಉತ್ತೀರ್ಣರಾದ ಅಭ್ಯರ್ಥಿಯು ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಪ್ಲೋಮಾ ಕೋರ್ಸಿಗೆ) ಪ್ರವೇಶ ಪಡೆದಲ್ಲಿ, ಮೇಲೆ ತಿಳಿಸಿದ ಬ್ರಿಡ್ಜ್ ಕೋರ್ಸುಗಳ ಜೊತೆಗೆ ಪ್ರವೇಶ ಪಡೆದ ಕೋರ್ಸುಗಳಿಗೆ ಸಂಬಂಧಿಸಿದ ಈ ಕೆಳಕಂಡಂತೆ ನಮೂದಿಸಿರುವ ಎರಡು ಬ್ರಿಡ್ಜ್ ಕೋರ್ಸುಗಳನ್ನು ಹೆಚ್ಚುವರಿಯಾಗಿ ತೆಗೆದುಕೊಂಡು ಒಟ್ಟು ಆರು ಬ್ರಿಡ್ಜ್ ಕೋರ್ಸುಗಳನ್ನು ಅಭ್ಯಸಿಸಬೇಕಾಗಿರುತ್ತದೆ.

| S.N | Diploma Programmes | Bridge Course | Semester |
|---|---|---|---|
| 1 | i). Mechanical Engineering.<br>ii).Mechanical Engg.(Machine Tools)<br>iii).Mechanical Engg.(WSM)<br>iv).Mechanical Engg.(HPE)<br>v). Mechanical Engg. (Instrumentation) vi).Mechatronics<br>vii).Metallurgical Engineering<br>viii) Automation & Robotics | Materials for Engineering | 3rdsem |
| | | Mechanical work shop practice-1 | 4thsem |

| | | | |
|---|---|---|---|
| 2 | Automobile Engineering | Mechanical Sciences & Engineering | 3rdsem |
| | | Automotive Engines | 4thsem |
| 3 | Aeronautical Engineering | Elements of Aeronautics | 3rdsem |
| | | Mechanical Workshop Practice | 4thsem |
| 4 | i). Computer Science & Engg.<br>ii).InformationScience & Eng<br>iii). Gaming & Animation<br>iv). Cloud Computing & Big data<br>v). Cyber Physical Systems & Security | Fundamentals of Computer | 3rdsem |
| | | Multimedia & Animation | 4thsem |
| 5 | i).Electronics & Communication Engg.<br>ii).Electronic Inst & Control Engg. | Digital Electronics | 3rdsem |
| | | Electronic Components & Devices | 4thsem |
| 6 | i). Electrical & Electronics Engg.<br>ii). Electrical Engg & EVT | Basics of Electrical Power systems | 3rdsem |
| | | Residential wiring practice | 4thsem |
| 7 | i). Civil Engineering<br>ii).Civil Environmental Engg.<br>iii).Civil(Public Health & Env) Engg. | Construction Materials | 3rdsem |
| | | Basic Surveying | 4thsem |
| 8 | Chemical Engineering | Particulate Technology | 3rdsem |
| | | Particulate Technology Lab | 4thsem |
| 9 | Polymer Technology | Polymer Fundamentals & Processing | 3rdsem |
| | | Polymer Fundamentals & Processing Lab | 4thsem |
| 10 | Printing Technology | Introduction to Printing Process & Materials | 3rdsem |
| | | Design & LayoutLab | 4thsem |
| 11 | Ceramics | Ceramic Fabrication | 3rdsem |
| | | Ceramic Fabrication Lab | 4thsem |
| 12 | Architecture Assistantship | Materials of Construction | 3rdsem |
| | | Visual Art & Drawing | 4thsem |
| 13 | Interior Decoration | Materials of Construction | 3rdsem |
| | | Drawing & Rendering | 4thsem |
| 14 | Mining & Mine Surveying | Mine Development & Underground | 3rdsem |
| | | Mine Geology-1 | 4thsem |
| 15 | Tool & Die Making | Manufacturing Technology | 3rdsem |
| | | Basic Workshop Practice | 4thsem |
| 16 | Textile Technology | Textile Fibre Technology | 3rdsem |
| | | Yarn Manufacturing Lab-I | 4thsem |
| 17 | Cinematography<br>Sound Recording &Engineering | Fundamentals of Photography | 3rdsem |
| | | Photo Sound Practical | 4thsem |

| | | | |
|---|---|---|---|
| 18 | Leather & Fashion Technology | Basics of Leather | 3rdsem |
| | | Leather Chemistry | 4thsem |
| 19 | Altenative Energy Technologies | Basics of Electrical Power systems | 3rdsem |
| | | Introduction to Alternative Energy Technologies | 4thsem |
| 20 | Travel & Tourism | Introduction to Hospitality Management | 3rdsem |
| | | Introduction to Organisational Pschycology | 4thsem |
| 21 | Food Processing & Preservation | Food Science | 3rdsem |
| | | Food Processing | 4thsem |

**ದ್ವಿತೀಯ ಪಿ.ಯು.ಸಿ(ವಿಜ್ಞಾನ)/ಪಿಯುಸಿ(ತಾಂತ್ರಿಕ ವಿಷಯಗಳು)ಯಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಸ್ಕೀಂ ಮುಖಾಂತರ 2ನೇ ವರ್ಷ / 3ನೇ ಸೆಮಿಸ್ಟರ್ ಡಿಪ್ಲೋಮಾ ಪ್ರವೇಶಕ್ಕೆ ಎ.ಐ.ಸಿ.ಟಿ.ಇ ಯ ಪ್ರವೇಶ ಮಾರ್ಗಸೂಚಿ ಪ್ರಕಾರ ಉಲ್ಲೇಖ(2)ರಲ್ಲಿ ಸರ್ಕಾರವು ಅನುಮತಿ ನೀಡಿರುವಂತೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳು** ಈ ಕೆಳಕಂಡ **ಕೋಷ್ಟಕ–3** ರಲ್ಲಿನ ಬ್ರಿಡ್ಜ್ ಕೋರ್ಸುಗಳನ್ನು ಅಭ್ಯಸಿಸಬೇಕಾಗಿರುತ್ತದೆ.

**ಕೋಷ್ಟಕ–3**

| Sl.No | Diploma Programme | Bridge Course Code | Bridge Course Name | Semester in which bridfge course to be taken |
|---|---|---|---|---|
| 01. | All Technical Diploma Progrmmes | | C-20 Computer Aided Engineering Drawing/C-20 Computer Aided Engineering Graphics / C-20Civil Engineering Graphics / C-20 Architecural Graphics (Relevant Drawing / Graphics course as prescribed in the respective C-20 1st Year diploma programme) | 3rd Semester |
| | | | C-20 IT Skills | 3rd Semester |
| | | | C-20 Project Management Skills | 4th Semester |
| 02. | Commercial Practice | 20CP12T | Financial Accounting-I | 3rd Semester |
| | | 20CP13E / 20CP13K | English/Kannada Shorthand-I | 3rd Semester |
| | | 20CP21T | Financial Accounting-II | 4th Semester |
| | | 20CP24E / 20CP24K | English/Kannada Shorthand-II | 4th Semester |
| | | 20CP25E / 20CP25K | English/Kannada Typewritting (Speed) | 4th Semester |
| 03. | Library and Information Science | 20LI11T | Foundations of Libraries | 3rd Semester |
| | | 20LI21T | Information and Society | 4th Semester |
| | | 20LI23T | Basics of ICM | 4th Semester |
| | | 20LI25P | ICM Practice | 4th Semester |
| 04. | Apparel Design & Fabrication Technology | 20FT11T | Pattern Illustration-I | 3rd Semester |
| | | 20FT12T | Apparel Sewing Techniques | 3rd Semester |
| | | 20FT15P | Fashion Sketching | 3rd Semester |
| | | 20FT21T | Pattern Illustration-II | 4th Semester |
| | | 20FT22T | Fiber Science | 4th Semester |
| | | 20FT24P | Yarn Craft-I | 4th Semester |
| 05. | MOM | 20CP12T | Financial Accounting-I | 3rd Semester |
| | | 20MM12P | Business Application Lab | 3rd Semester |
| | | 20CP21T | Financial Accounting-II | 4th Semester |
| | | 20CP22T | Elements of Business Statistics | 4th Semester |

## 1. ಡಿಪ್ಲೋಮಾ ಪ್ರವೇಶಕ್ಕೆ ಇರಬೇಕಾದ ಅರ್ಹತೆ :

ಅಭ್ಯರ್ಥಿಯು ಭಾರತೀಯ ಪ್ರಜೆಯಾಗಿರಬೇಕು; ಮತ್ತು

ಅ) ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಕರ್ನಾಟಕದಲ್ಲಿ 02 ವರ್ಷಗಳ ಐ.ಟಿ.ಐ/ದ್ವಿತೀಯ ಪಿ.ಯು.ಸಿ (ವಿಜ್ಞಾನ/ ತಾಂತ್ರಿಕ ವಿಷಯಗಳು) ವ್ಯಾಸಂಗ ಮಾಡಿ ಉತ್ತೀರ್ಣರಾಗಿರಬೇಕು.

ಆ) ಅಭ್ಯರ್ಥಿಯು ಕರ್ನಾಟಕದಲ್ಲಿ 1ನೇ ತರಗತಿಯಿಂದ, ಅರ್ಹತಾ (ಎಸ್.ಎಸ್.ಎಲ್.ಸಿ/02 ವರ್ಷಗಳ ಐ.ಟಿ.ಐ/ಪಿ.ಯು.ಸಿ (ವಿಜ್ಞಾನ/ ತಾಂತ್ರಿಕ ವಿಷಯಗಳು) ಪರೀಕ್ಷೆಯನ್ನೊಳಗೊಂಡು, 07 ವರ್ಷಗಳ ವ್ಯಾಸಂಗ ಮಾಡಿರಬೇಕು.

ಇ) ಸಿ.ಬಿ.ಎಸ್.ಸಿ/ಐ.ಸಿ.ಎಸ್.ಸಿ/ಕರ್ನಾಟಕೇತರ ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ/ತತ್ಸಮಾನ ವ್ಯಾಸಂಗ ಮಾಡಿದ ಅಭ್ಯರ್ಥಿಗಳು ಸೀಟು ಹಂಚಿಕೆಯಾದ ನಂತರ ಪ್ರವೇಶಾತಿ ಪಡೆಯುವ ಸಮಯದಲ್ಲಿ ಅರ್ಹತಾ ಪ್ರಮಾಣ ಪತ್ರದ ನಿಗಧಿತ ರೂ.1000/– ಶುಲ್ಕವನ್ನು ಖಜಾನೆ–2 ಮುಖಾಂತರ ತಾಂತ್ರಿಕ ಪರೀಕ್ಷಾ ಮಂಡಳಿಯ ಲೆಕ್ಕ ಶೀರ್ಷಿಕೆಗೆ ಪಾವತಿಸತಕ್ಕದ್ದು ಅಥವಾ ಸಮೀಪದ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಪಾವತಿಸಿ ರಶೀದಿ ಪಡೆಯತಕ್ಕದ್ದು. ಪ್ರವೇಶಾತಿ ಪ್ರಕ್ರಿಯೆ ಮುಗಿದ ನಂತರ ಸಂಸ್ಥೆಯವರು ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಂದ ಅರ್ಹತಾ ಪ್ರಮಾಣ ಪತ್ರವನ್ನು ಪಡೆದು ಪ್ರವೇಶಾನುಮೋದನೆ ಸಮಯದಲ್ಲಿ ಸಲ್ಲಿಸತಕ್ಕದ್ದು.

## 2. ಅರ್ಜಿ ಮತ್ತು ದಾಖಲಾತಿಗಳನ್ನು ಸಲ್ಲಿಸುವ ವಿಧಾನ:

ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷ/3ನೇ ಸೆಮಿಸ್ಟರ್ ಡಿಪ್ಲೋಮಾ ಪ್ರವೇಶ ಬಯಸುವ ಅಭ್ಯರ್ಥಿಗಳು ಅರ್ಜಿಯನ್ನು **ಇಲಾಖೆಯ ಅಧೀಕೃತ ವೆಬ್‌ಸೈಟ್ dtetech.karnataka.gov.in/kartechnical or dtek.karnataka.gov.in ಗಳಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು,** ಭರ್ತಿ ಮಾಡಿದ ಅರ್ಜಿಯನ್ನು **ಅಭ್ಯರ್ಥಿಯು ಪ್ರವೇಶ ಬಯಸುವ ಸರ್ಕಾರಿ ಅಥವಾ ಅನುದಾನಿತ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಿಗೆ** ಸಲ್ಲಿಸುವುದು. ಅರ್ಜಿ ಸಲ್ಲಿಸಿರುವುದಕ್ಕೆ ಸ್ವೀಕೃತಿಯನ್ನು ಪಡೆಯತಕ್ಕದ್ದು (ಪಾಲಿಟೆಕ್ನಿಕ್ ಕಾಲೇಜುಗಳ ವಿವರಗಳ ಹಾಗೂ ಕೋರ್ಸುಗಳ ವಿವರವನ್ನು ಇ–ಮಾಹಿತಿ ಪುಸ್ತಕದಲ್ಲಿ ನೀಡಲಾಗಿದೆ).

**ಅಭ್ಯರ್ಥಿಗಳು ಅರ್ಜಿ ಶುಲ್ಕವನ್ನು (ಸಾಮಾನ್ಯ ವರ್ಗ/2ಎ/2ಬಿ/3ಎ/3ಬಿ ರೂ.100/– & ಪ.ಜಾ/ಪ.ಪಂ/ಪ್ರವರ್ಗ–1 ರೂ.50) ನಗದು ರೂಪದಲ್ಲಿ ಅರ್ಜಿ ಸಲ್ಲಿಸುವ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ನಲ್ಲಿಯೇ ಪಾವತಿಸತಕ್ಕದು.**

ಅಭ್ಯರ್ಥಿಗಳು ಅರ್ಜಿಯೊಂದಿಗೆ ಸಂಬಂಧಪಟ್ಟ ಈ ಕೆಳಕಂಡ ಮೂಲ ದಾಖಲಾತಿಗಳನ್ನು ಕಡ್ಡಾಯವಾಗಿ ಹಾಜರುಪಡಿಸುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಇಲ್ಲದಿದ್ದ ಪಕ್ಷದಲ್ಲಿ ವಿದ್ಯಾರ್ಥಿಯ ಶೈಕ್ಷಣಿಕ ಹಿತದೃಷ್ಟಿಯಿಂದ ವಿದ್ಯಾರ್ಥಿ/ನಿಯರು ಅಗತ್ಯ ದಾಖಲಾತಿಗಳನ್ನು ಪ್ರವೇಶಾನುಮೋದನೆಯ ದಿನಾಂಕದ ಒಳಗಾಗಿ ಸಲ್ಲಿಸುವ ಬಗ್ಗೆ ಮುಚ್ಚಳಿಕೆ ಪತ್ರವನ್ನು ನೀಡಿ ಪ್ರವೇಶ ಪಡೆಯುವುದು. ನಂತರ ಪ್ರವೇಶಾನುಮೋದನೆಯ ಸಮಯದಲ್ಲಿ ವಿವಿಧ ಪ್ರವರ್ಗಗಳಡಿ ಸೀಟು ಪಡೆದ ಅಭ್ಯರ್ಥಿಗಳು ಸಂಬಂಧಿಸಿದ ದಾಖಲಾತಿಗಳನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು. ತಪ್ಪಿದ್ದಲ್ಲಿ, ಅಂತಹ ವಿದ್ಯಾರ್ಥಿಗಳ ಪ್ರವೇಶವನ್ನು ಯಾವುದೇ ಮುನ್ಸೂಚನೆ ಇಲ್ಲದೆ ರದ್ದುಪಡಿಸಲಾಗುವುದು.

ಈ) 02 ವರ್ಷಗಳ ಐ.ಟಿ.ಐ ಅಂಕಪಟ್ಟಿ & ಪ್ರಮಾಣ ಪತ್ರ.

ಉ) ದ್ವಿತೀಯ ಪಿ.ಯು.ಸಿ(ವಿಜ್ಞಾನ)/ದ್ವಿತೀಯ ಪಿ.ಯು.ಸಿ(ತಾಂತ್ರಿಕ ವಿಷಯಗಳು) ಅಂಕಪಟ್ಟಿ

ಊ) ಎಸ್.ಎಸ್.ಎಲ್.ಸಿ/ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ.

ಋ) ಮೂಲ ವರ್ಗಾವಣೆ ಪ್ರಮಾಣ ಪತ್ರ.

ಎ) ಕರ್ನಾಟಕದಲ್ಲಿ 01ನೇ ತರಗತಿಯಿಂದ 02 ವರ್ಷಗಳ ಐ.ಟಿ.ಐ/ದ್ವಿತೀಯ ಪಿ.ಯು.ಸಿ(ವಿಜ್ಞಾನ)/ದ್ವಿತೀಯ ಪಿ.ಯು.ಸಿ(ತಾಂತ್ರಿಕ ವಿಷಯಗಳು)ವರೆಗೆ ಕನಿಷ್ಠ 07 ವರ್ಷ ವ್ಯಾಸಂಗ ಮಾಡಿದ ಬಗ್ಗೆ ವ್ಯಾಸಂಗ ಪ್ರಮಾಣ ಪತ್ರ. ಈ ಪ್ರಮಾಣ ಪತ್ರವನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಅಥವಾ ಉಪ ನಿರ್ದೇಶಕರು ಇವರಿಂದ ಧೃಡೀಕರಿಸಿರಬೇಕು.

ಏ) 01ನೇ ತರಗತಿಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿದ ಬಗ್ಗೆ ವ್ಯಾಸಂಗ ಪ್ರಮಾಣ ಪತ್ರ. ಈ ಪ್ರಮಾಣ ಪತ್ರವನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಅಥವಾ ಉಪ ನಿರ್ದೇಶಕರು ಇವರಿಂದ ಧೃಡೀಕರಿಸಿರಬೇಕು. ಹಾಗೂ ಕನ್ನಡ ಮಾಧ್ಯಮ / ಗ್ರಾಮೀಣ ಕೋಟಾದಡಿ ಪ್ರವೇಶ ಬಯಸುವ ಅಭ್ಯರ್ಥಿಗಳು ಸಂಬಂಧಿಸಿದ ಪ್ರಮಾಣ ಪತ್ರವನ್ನು ಸಲ್ಲಿಸುವುದು. (ಗ್ರಾಮೀಣ ಕೋಟಾದಡಿ ಪ್ರವೇಶ ಬಯಸುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು **"ಪರಿಶೀಲನಾ ಪ್ರಮಾಣ ಪತ್ರ"** ಸಲ್ಲಿಸತಕ್ಕದ್ದು).

ಐ) ಮೀಸಲಾತಿಯಡಿ ಕ್ಲೇಮು ಮಾಡುವ ಅಭ್ಯರ್ಥಿಗಳು ಮೂಲ ಜಾತಿ ಪ್ರಮಾಣ ಪತ್ರವನ್ನು ಮತ್ತು ಆದಾಯ ಪ್ರಮಾಣ ಪತ್ರವನ್ನು ಪ್ರವೇಶ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕು. ಮೀಸಲಾತಿ/ಆದಾಯ ಪ್ರಮಾಣ ಪತ್ರ ಸಲ್ಲಿಸದೇ ಇರುವ ಅಭ್ಯರ್ಥಿಗಳು ನಿಯಮಗಳ ಪ್ರಕಾರ ಪ್ರವೇಶಕ್ಕೆ ಇರಬೇಕಾದ ಇತರೇ ಅರ್ಹತೆಗಳನ್ನು ಪೂರೈಸಿದ್ದಲ್ಲಿ ಸಾಮಾನ್ಯ ಗುಂಪಿನಡಿ ಪರಿಗಣಿಸಲಾಗುವುದು

ಒ) ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 04 ಭಾವಚಿತ್ರಗಳು.

**3. ಕರ್ನಾಟಕದಲ್ಲಿ ಕನಿಷ್ಠ 07 ವರ್ಷಗಳ ವ್ಯಾಸಂಗ ಮಾಡಿರಬೇಕೆಂಬ ಷರತ್ತಿನಿಂದ ಕೆಳಕಂಡ ಪ್ರವರ್ಗಗಳ ಅಭ್ಯರ್ಥಿಗಳಿಗೆ (ಎ ಇಂದ ಜಿ ಯವರೆಗೆ) ವಿನಾಯಿತಿ ಇರುತ್ತದೆ.**

**ಎ)** ಸೈನಿಕರ, ಕೇಂದ್ರ ಸರ್ಕಾರಿ ನೌಕರರ, ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳು ಅಥವಾ ಜಂಟಿ ಸಹಯೋಗದ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಮಕ್ಕಳಿಗೆ ಸಂಬಂಧಿಸಿದ ತಂದೆ/ಪೋಷಕರು ಕರ್ನಾಟಕದಲ್ಲಿ ಕನಿಷ್ಠ 12 ತಿಂಗಳವರೆಗೆ (ಅಂದರೆ ಪ್ರವೇಶ ವರ್ಷದ ಜುಲೈ 01ಕ್ಕೆ) ಕರ್ನಾಟಕದಲ್ಲಿ ಕೆಲಸ ಮಾಡಿರಬೇಕು.

**ಬಿ)** ಅಖಿಲ ಭಾರತ ಸೇವೆಯ ಕರ್ನಾಟಕ ವೃಂದದಲ್ಲಿ ಸೇವೆ ಸಲ್ಲಿಸಿದ್ದ ಅಥವಾ ಸೇವೆ ಸಲ್ಲಿಸುತ್ತಿರುವ ಹಾಗೂ ರಾಜ್ಯದಲ್ಲಿ ಸೇವೆ ಸಲ್ಲಿಸಿದ್ದ ಅಥವಾ ಸೇವೆ ಸಲ್ಲಿಸುತ್ತಿರುವ ನೌಕರರ ಮಕ್ಕಳು ಕರ್ನಾಟಕೇತರ ಪ್ರದೇಶದಲ್ಲಿ 01ನೇ ತರಗತಿಯಿಂದ 02 ವರ್ಷಗಳ ಐ.ಟಿ.ಐ ವ್ಯಾಸಂಗ ಮಾಡಿದ ಅವಧಿಗೆ ಅಂದರೆ ಅಭ್ಯರ್ಥಿಯ ತಂದೆ/ಪೋಷಕರು ಕರ್ನಾಟಕೇತರ ಪ್ರದೇಶದಲ್ಲಿ ದಿನಾಂಕ:01–07–2022ರ ವರೆಗೆ ಕೆಲಸ ನಿರ್ವಹಿಸಿದಲ್ಲಿ ಅಂತಹ ಅಭ್ಯರ್ಥಿಗಳಿಗೆ.

**ಸಿ)** ಸೈನಿಕ/ಮಾಜಿ ಸೈನಿಕ (ಕನಿಷ್ಠ 05 ವರ್ಷಗಳ ಸೇವೆ ಸಲ್ಲಿಸಿರಬೇಕು) ಇವರು ಸೇವೆಗೆ ಸೇರುವ ಸಮಯದಲ್ಲಿ ಕರ್ನಾಟಕದ ನಿವಾಸಿ ಎಂದು ಧೃಡಪಡಿಸಲು ನೀಡಿರುವ ವಾಸಸ್ಥಳದ ವಿಳಾಸವು ಕರ್ನಾಟಕದ್ದಾಗಿರಬೇಕು. ಈ ದಾಖಲೆಯನ್ನು ಡಿಫೆನ್ಸ್ ಯನಿಟ್ಸ್ ಅಥವಾ ಕಾರ್ಯದರ್ಶಿ, ರಾಜ್ಯ/ಜಿಲ್ಲಾ ಸೈನಿಕ್ ಬೋರ್ಡ್ ಇವರಿಂದ ನೀಡಲ್ಪಟ್ಟ ಪ್ರಮಾಣ ಪತ್ರವನ್ನು ಸೀಟು ಆಯ್ಕೆಯ ಪ್ರಕ್ರಿಯೆ ಸಮಯದಲ್ಲಿ ಒದಗಿಸಬೇಕು. ಇಂತಹ ಸೈನಿಕ/ಮಾಜಿ ಸೈನಿಕ ಮಕ್ಕಳಿಗೆ

**ಡಿ) ಕನಾಟಕದಿಂದ ಆರಿಸಲ್ಪಟ್ಟ ಲೋಕಸಭಾ ಸದಸ್ಯರ ಮಕ್ಕಳಿಗೆ;**

ಲೋಕಸಭಾ ಸದಸ್ಯತ್ವ ಅವಧಿಯಲ್ಲಿ ಅವರ ಮಕ್ಕಳು 01ನೇ ತರಗತಿಯಿಂದ ಅರ್ಹತಾ ಪರೀಕ್ಷೆಯವರೆಗೆ ದೆಹಲಿ ವ್ಯಾಸಂಗ ಮಾಡಿದ ಅವಧಿಗೆ.

**ಇ)** ಕೇಂದ್ರ ಸರ್ಕಾರಿ ನೌಕರರು ಸೇವೆಗೆ ಸೇರುವ ಸಮಯದಲ್ಲಿ ಕರ್ನಾಟಕದವರೆಂದು ಧೃಢಪಡಿಸಲು ನೀಡಿರುವ ದಾಖಲೆಗಳನ್ವಯ, ಕರ್ನಾಟಕೇತರ ಪ್ರದೇಶದಲ್ಲಿ ಕಾರ್ಯ ನಿರ್ವಹಿಸಿದ ಅಥವಾ ಕಾರ್ಯನಿರ್ವಹಿಸುತ್ತಿರುವ ನೌಕರರ ಮಕ್ಕಳು ಕರ್ನಾಟಕದಲ್ಲಿ 01ನೇ ತರಗತಿಯಿಂದ 02 ವರ್ಷಗಳ ಐ.ಟಿ.ಐ ವರೆಗೆ ಕನಿಷ್ಠ 07 ವರ್ಷಗಳವರೆಗೆ ವ್ಯಾಸಂಗ ಮಾಡಿದ್ದಲ್ಲಿ.

**ಎಫ್)** ಕೇಂದ್ರ ಸರ್ಕಾರಿ ನೌಕರರನ್ನು ಹೊರತುಪಡಿಸಿ ದೇಶದ ಯಾವುದೇ ಭಾಗಕ್ಕೆ ವರ್ಗಾವಣೆಯಾಗುವ ಅವಕಾಶವಿರುವಂತಹ ಇತರೆ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಪ್ರವೇಶ ವರ್ಷದ ಅವಧಿಯ ದಿನಾಂಕ: 01–07–2022ಕ್ಕೆ ಕನಿಷ್ಠ 12 ತಿಂಗಳು ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ/ವಾಸಿಸುತ್ತಿದ್ದಲ್ಲಿ; ಮತ್ತು;

- ಅಂತಹವರ ಮಗ/ಮಗಳು ಅರ್ಹತಾ ತರಗತಿಯನ್ನು ಕರ್ನಾಟಕದ ಯಾವುದೇ ಅಧಿಕೃತ ಶಾಲೆಯಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರಬೇಕು.
- ಅಭ್ಯರ್ಥಿಯ ತಂದೆ ಅಥವಾ ತಾಯಿ ಕರ್ನಾಟಕದಲ್ಲಿ ಕನಿಷ್ಠ 10 ವರ್ಷಗಳವರೆಗೆ ವ್ಯಾಸಂಗ ಮಾಡಿರಬೇಕು– ಇಂತಹವರ ಮಕ್ಕಳು.

**4. ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದ ಶುಲ್ಕ:**

ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ಅನ್ವಯವಾಗುವಂತೆ ಕೆಳಕಂಡ ಪ್ರವೇಶ ಶುಲ್ಕವನ್ನು ನಿಗದಿಪಡಿಸಲಾಗಿದೆ.

| ಕ್ರ. ಸಂ. | ಪಾಲಿಟೆಕ್ನಿಕ್ | ಬೋಧನಾ ಶುಲ್ಕ | ಅಭಿವೃದ್ಧಿ ಶುಲ್ಕ | ಇತರೆ ಶುಲ್ಕ | ಒಟ್ಟು |
|---|---|---|---|---|---|
| 1. | ಸರ್ಕಾರಿ ಪಾಲಿಟೆಕ್ನಿಕ್ | ರೂ.2,940/– | ರೂ. 500/– | ರೂ. 830/– | **ರೂ. 4,270/–** |
| 2. | ಅನುದಾನಿತ ಪಾಲಿಟೆಕ್ನಿಕ್ | ರೂ. 5,618/– | ರೂ. 500/– | ರೂ. 830/– | **ರೂ. 6,948/–** |

ಆದಾಗ್ಯೂ ವಿವಿಧ ಪ್ರವರ್ಗಗಳ ಮೀಸಲಾತಿಯಡಿ ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಪ್ರವೇಶಾತಿ ಸಮಯದಲ್ಲಿ ಸರ್ಕಾರದ ಆದೇಶಗಳ ಪ್ರಕಾರ ವಿನಾಯಿತಿ ಪಡೆದು ಪಾವತಿಸಬೇಕಾದ ಶುಲ್ಕಗಳ ವಿವರ:

| ಕ್ರ. ಸಂ. | ವರ್ಗ | ಪೋಷಕರ ವಾರ್ಷಿಕ ಆದಾಯ ಮಿತಿ | ಸರ್ಕಾರಿ ಪಾಲಿಟೆಕ್ನಿಕ್ ಕೋರ್ಸುಗಳಿಗೆ | ಅನುದಾನಿತ ಪಾಲಿಟೆಕ್ನಿಕ್ (ಅನುದಾನಿತ ಕೋರ್ಸುಗಳಿಗೆ) |
|---|---|---|---|---|
| (1) | (2) | (3) | (4) | (5) |
| 01. | ಸಾಮಾನ್ಯ | –– | ರೂ. 4,270/– | ರೂ. 6,948/– |
| 02. | ಪ. ಜಾತಿ ಮತ್ತು ಪ.ಪಂಗಡ | ರೂ.2.50 ಲಕ್ಷದವರೆಗೆ | ರೂ. 430/– | ರೂ. 430/– |
| 03. | ಪ. ಜಾತಿ ಮತ್ತು ಪ.ಪಂಗಡ | ರೂ. 2.50 ದಿಂದ ರೂ. 10.00 ಲಕ್ಷದವರೆಗೆ | ರೂ. 800/– | ರೂ. 800/– |
| 04. | ಪ್ರವರ್ಗ–1 **[ನಧಾಫ್, ಪಿಂಜಾರ, ದರವೇಶ್, ಚಪ್ಪರಬಂದ್, ಕಸಾಬ, ಪೂಲ್‌ಮಾಲಿ (ಮುಸ್ಲಿಂ) ಹೊರತುಪಡಿಸಿ]** | ರೂ. 2.50 ಲಕ್ಷದವರೆಗೆ | ರೂ. 960/– | ರೂ. 3,638/– |
| 05. | 2ಎ/3ಎ/3ಬಿ (ಅಲ್ಪಸಂಖ್ಯಾತ ಸಮುದಾಯಗಳನ್ನು ಹೊರತುಪಡಿಸಿ) | ರೂ. 1.00 ಲಕ್ಷದವರೆಗೆ | ರೂ. 960/– | ರೂ. 3,638/– |
| 06. | **2ಬಿ ಮುಸ್ಲಿಂ ಸಮುದಾಯ ಹಾಗೂ ಪ್ರವರ್ಗ–1ರಲ್ಲಿ ಬರುವ ನಧಾಫ್, ಪಿಂಜಾರ, ದರವೇಶ್, ಚಪ್ಪರಬಂದ್, ಕಸಾಬ, ಪೂಲ್‌ಮಾಲಿ(ಮುಸ್ಲಿಂ) ಪ್ರವರ್ಗ2ಎ–ಭೌದ್ದ ಸಮುದಾಯ, ಪ್ರವರ್ಗ3ಬಿ–ಕ್ರಿಶ್ಚಿಯನ್, ಜೈನ್, ಪಾರ್ಸಿ, ಸಿಖ್ ಸಮುದಾಯ (ಹಿಂದುಳಿದ ವರ್ಗ ಹೊರತುಪಡಿಸಿ)** | –– | ರೂ. 4,270/– | ರೂ. 6,948/– |

- ❖ ಪ್ರತಿ ಸಂಸ್ಥೆಯು ಕನಿಷ್ಠ ಒಂದಾದರೂ (ಇಲಾಖೆಯಿಂದ ಎನ್.ಎಸ್.ಎಸ್ ಅನುದಾನ ಪಡೆಯುವ ಘಟಕವಾಗಲೀ/ಸ್ವ–ಆರ್ಥಿಕ ಘಟಕವಾಗಲೀ) ಘಟಕವನ್ನು ಖಡ್ಡಾಯವಾಗಿ ಹೊಂದಿರಬೇಕು.
- ❖ ಇಲಾಖೆಯಿಂದ ಎನ್.ಎಸ್.ಎಸ್ ಅನುದಾನ ಪಡೆಯುವ ಘಟಕವನ್ನು ಈಗಾಗಲೇ ಹೊಂದಿರುವ ಸಂಸ್ಥೆಗಳು ಸ್ವ–ಆರ್ಥಿಕ ಘಟಕವನ್ನು ಸಹ ಸ್ಥಾಪಿಸುವುದಿದ್ದರೇ ಮಾತ್ರ ಮೇಲ್ಕಂಡ ಶುಲ್ಕದ ಜೊತೆಗೆ ರೂ.40/–ನ್ನು ಎಲ್ಲಾ ವಿದ್ಯಾರ್ಥಿಗಳಿಂದ ಪ್ರವೇಶ ಸಮಯದಲ್ಲಿ ಪಾವತಿಸಿಕೊಳ್ಳತಕ್ಕದ್ದು.
- ❖ ಎನ್.ಎಸ್.ಎಸ್ ಘಟಕವನ್ನು ಈವರೆಗೂ ಹೊಂದಿಲ್ಲದ ಸಂಸ್ಥೆಗಳು ಸ್ವ–ಆರ್ಥಿಕ ಎನ್.ಎಸ್.ಎಸ್ ಘಟಕ ಸ್ಥಾಪಿಸಲು ಮೇಲ್ಕಂಡ ಶುಲ್ಕದ ಜೊತೆಗೆ ಈ ವರ್ಷಕ್ಕೆ ಮಾತ್ರ ರೂ.50/– ನ್ನು ಎಲ್ಲಾ ವಿದ್ಯಾರ್ಥಿಗಳಿಂದ ಪ್ರವೇಶ ಸಮಯದಲ್ಲಿ ಪಾವತಿಸಿಕೊಳ್ಳತಕ್ಕದು (ಮುಂದಿನ ವರ್ಷದಿಂದ ರೂ.40/–).

**ಮೇಲ್ಕಂಡಂತೆ ಶುಲ್ಕ ವಿನಾಯಿತಿ/ಮರುಪಾವತಿ ಪಡೆಯಲು ಆಸಕ್ತರಿರುವ ಅಭ್ಯರ್ಥಿಗಳು ಪಾಲಿಸಬೇಕಾದ ನಿಯಮಗಳನ್ನು ಸ್ಪಷ್ಟಪಡಿಸಲಾಗಿದ್ದು, ಅದರಂತೆ ವಿದ್ಯಾರ್ಥಿಗಳು ಪ್ರವೇಶ ಸಮಯದಲ್ಲಿ ನಿಗಧಿತ ಶುಲ್ಕವನ್ನು ಪಾವತಿಸಿ, ಸಂಬಂಧಪಟ್ಟ ಸರ್ಕಾರಿ ಇಲಾಖೆಗಳಿಂದ ನೀಡುವ ವಿದ್ಯಾರ್ಥಿವೇತನಕ್ಕಾಗಿ ಕಡ್ಡಾಯವಾಗಿ ಅರ್ಜಿ ಸಲ್ಲಿಸತಕ್ಕದ್ದು.**

**ವಿನಾಯಿತಿ ಪಡೆದ ಅರ್ಹ ಶುಲ್ಕಗಳ ಮರುಪಾವತಿಗೆ ಅಭ್ಯರ್ಥಿಗಳು State Scholarship Portal / National Scholarship Portal ವೆಬ್‌ಸೈಟ್‌ಗಳಲ್ಲಿ ಆನ್–ಲೈನ್ ಮುಖಾಂತರ ಕಡ್ಡಾಯವಾಗಿ ಅರ್ಜಿ ಸಲ್ಲಿಸಿ, ಮರುಪಾವತಿ ಪಡೆದು ಸಂಸ್ಥೆಗೆ ಕಡ್ಡಾಯವಾಗಿ ಪಾವತಿಸತಕ್ಕದ್ದು. ಶುಲ್ಕ ವಿನಾಯಿತಿ ಪಡೆದ ಅಭ್ಯರ್ಥಿಗಳು ಅರ್ಜಿ ಸಲ್ಲಿಸದೆ ಇದ್ದ ಪಕ್ಷದಲ್ಲಿ ವಿನಾಯಿತಿ ಪಡೆದ ಎಲ್ಲಾ ಶುಲ್ಕಗಳನ್ನು ಸಾಮಾನ್ಯ ವರ್ಗದ ಅಭ್ಯರ್ಥಿಗಳಂತೆ ಕಡ್ಡಾಯವಾಗಿ ಪಾವತಿ ಮಾಡತಕ್ಕದ್ದು.**

ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ ಇರಬೇಕಾದ ಕನಿಷ್ಠ ವಿದ್ಯಾರ್ಹತೆ, ಪಾಲಿಟೆಕ್ನಿಕ್‌ಗಳು, ಕೋರ್ಸ್‌ಗಳು, ಮೀಸಲಾತಿ ವಿವರ ಹಾಗೂ ವಿವಿಧ ಪ್ರಮಾಣ ಪತ್ರಗಳ ನಮೂನೆಯನ್ನು ಇ–ಮಾಹಿತಿ ಪುಸ್ತಕದಲ್ಲಿ ನೀಡಲಾಗಿದೆ. ಇ–ಮಾಹಿತಿ ಪುಸ್ತಕದಲ್ಲಿ ನಮೂದಿಸಿರುವ ಸೂಚನೆಗಳನ್ನು ಸ್ಪಷ್ಟವಾಗಿ ಓದಿಕೊಂಡು **ಅಭ್ಯರ್ಥಿಯು ಪ್ರವೇಶ ಬಯಸುವ ಸರ್ಕಾರಿ ಅಥವಾ ಅನುದಾನಿತ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಿಗೆ** ಅರ್ಜಿಗಳನ್ನು ಸಲ್ಲಿಸುವುದು.

***ಚಾಲ್ತಿಯಲ್ಲಿರುವ ವಿವಿಧ ನಿಯಮಗಳು ಮತ್ತು ಸರ್ಕಾರಿ ಆದೇಶಗಳಲ್ಲಿ ಸೂಚಿಸಿರುವ ಅಂಶಗಳನ್ನು ಸ್ಪಷ್ಟವಾಗಿ ಗಮನದಲ್ಲಿರಿಸಿಕೊಂಡು ವಿದ್ಯಾರ್ಥಿಗಳ ಪ್ರವೇಶ ಮಾಡಿಕೊಳ್ಳಬೇಕೆಂದು ಹಾಗೂ ನಿಯಮಗಳ ಪ್ರಕಾರ ಪ್ರವೇಶವನ್ನು ಪೂರೈಸುವಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ ತಿಳಿಸಲಾಗಿದೆ.***

*ಪ್ರವೇಶಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಗಳಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀಕೃತ dtek.karnataka.gov.in or dtetech.karnataka.gov.in/kartechnical ಗಳ ವೆಬ್ ಸೈಟ್‌ಗಳನ್ನು ಸಂಪರ್ಕಿಸಬಹುದಾಗಿರುತ್ತದೆ.*

Digitally signed by
N Manjushree
Date: 30-05-2025
17:38:56

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**
**ಬೆಂಗಳೂರು**

**ಗೆ,**

***ರಾಜ್ಯದ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ*** – ಮಾಹಿತಿಗಾಗಿ & ಮುಂದಿನ ಅಗತ್ಯ ಕ್ರಮಕ್ಕಾಗಿ ಹಾಗೂ ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು ಮತ್ತು ಮೇಲೆ ನಮೂದಿಸಿರುವಂತೆ ಕೂಡಲೇ ಕ್ರಮ ತೆಗೆದುಕೊಂಡು ಈ ಬಗ್ಗೆ ಸ್ಥಳೀಯವಾಗಿ ಪತ್ರಿಕಾ ಪ್ರಕಟಣೆಯನ್ನು ನೀಡಿ, ಅಭ್ಯರ್ಥಿಗಳ ಮತ್ತು ಪೋಷಕರ ಗಮನಕ್ಕೆ ತರುವುದು..

**ಪ್ರತಿ ಮಾಹಿತಿಗಾಗಿ:–**

1. ಆಯುಕ್ತರ ಆಪ್ತಶಾಖೆಗೆ.
2. ನಿರ್ದೇಶಕರ ಆಪ್ತಶಾಖೆಗೆ
3. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಕಾರ್ಯದರ್ಶಿಗಳು(ಪರೀಕ್ಷೆ), ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
5. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂ.ಶಿ.ನಿ, ಬೆಂಗಳೂರು,
6. ಎಸ್.ಟಿ.ಎಲ್ ಮತ್ತು ಡಿವಿಪಿ(2) ವಿಭಾಗಕ್ಕೆ.
7. ಇಆರ್‌ಎಸ್ ವಿಭಾಗಕ್ಕೆ – ಕರ್ನಾಟಕೇತರ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರ ವಿತರಿಸಲು ಅಗತ್ಯ ಕ್ರಮಕ್ಕಾಗಿ.
8. ಇ–ಆಡಳಿತ ವಿಭಾಗಕ್ಕೆ – ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
9. ಕಡತಕ್ಕೆ